**ವಿರಾಜಪೇಟೆ ತಾಲ್ಲೂಕು ರಸ್ತೆ ದುರಸ್ತಿ**

673 - ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ವಿರಾಜಪೇಟೆ ತಾಲ್ಲೂಕಿನಲ್ಲಿ ಬರುವ ರಸ್ತೆಗಳ ದುರಸ್ತಿ ಇನ್ನೂ ಪೂರ್ಣವಾಗದೆ ಬಹಳಷ್ಟು ನಿಧಾನ ಗತಿಯಲ್ಲಿ ಕೆಲಸವಾಗಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ;*

ಆ) *ಹಾಗಿದ್ದಲ್ಲಿ, ಅಪೂರ್ಣಗೊಂಡ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ರಸ್ತೆಗಳ ದುರಸ್ತಿಯನ್ನು ಮಾಡಲಾಗುತ್ತಿದ್ದು, ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಆ) ಈ ಸಾಲಿನಲ್ಲಿ ಇದುವರೆವಿಗೂ ರಸ್ತೆ ದುರಸ್ತಿಗೆ 28.56 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ. ಇನ್ನುಳಿದ ತಿಂಗಳುಗಳ ಒಳಗಾಗಿ ಇನ್ನು ಸುಮಾರು 30.00 ಲಕ್ಷ ರೂ.ಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ.

**ಕೊಡಗು ಜಿಲ್ಲೆಯಲ್ಲಿ ಸೀಮೆಎಣ್ಣೆ ವಿತರಣೆ**

664 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೊಡಗು ಜಿಲ್ಲೆಗೆ ಪ್ರತಿ ತಿಂಗಳು ಎಷ್ಟು ಸೀಮೆಎಣ್ಣೆ ವಿತರಿಸಲಾಗುತ್ತಿದೆ. (ತಾಲ್ಲೂಕುವಾರು ವಿವರ ನೀಡುವುದು);*

ಆ) *ಕೊಡಗು ಜಿಲ್ಲೆಗೆ ಸರಬರಾಜು ಮಾಡಲು ನಿಗದಿಪಡಿಸಿರುವ ಸೀಮೆಎಣ್ಣೆಯ ಪ್ರಮಾಣವೆಷ್ಟು (ತಾಲ್ಲೂಕುವಾರು ನೀಡುವುದು)?*

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ನಿಗದಿತ ಪ್ರಮಾಣ ಹಾಗೂ ಹೆಚ್ಚುವರಿ ಬಿಡುಗಡೆ ಪ್ರಮಾಣದ ವಿವರ ಲಗತ್ತಿಸಿದೆ.

ಆ) ಹಂಚಿಕೆ ಮಾಡಲಾದ ಪ್ರಮಾಣವನ್ನು ವಿತರಣೆಗೆ ನಿಗದಿ ಪಡಿಸಲಾಗಿದೆ.